**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**ಸ್ಪೇಷಲ್ ಮೊಕದ್ದಮೆ ನಂಃ 62/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ- | ಧರ್ಮರಾಜ್ | ಪಿಡಬ್ಲ್ಯೂಃ-12 |
| ತಂದೆಯ ಹೆಸರು | ಃ- | ಗೋಪಾಲ ಶೆಟ್ಟಿ | ಸಿಡಬ್ಲ್ಯೂಃ-29 |
| ವಯಸ್ಸು | ಃ- | 72 ವರ್ಷ | |
| ಉದ್ಯೋಗ | ಃ- | ನಿವೃತ್ತ ಆರಕ್ಷಕ ನಿರೀಕ್ಷಕರು | |
| ವಾಸ ಸ್ಥಳ | ಃ- | ಎನ.ಆರ್.ಪುರ. | |

**ದಿನಾಂಕಃ- 20.09.2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

(ಈ ದಿನ 4 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು 4 ನೇ ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು 4 ನೇ ಆರೋಪಿಯನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ ಹಾಗಾಗಿ 4 ನೇ ಆರೋಪಿಯ ಗೈರು ಹಾಜರಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ನಡೆಸಲಾಯಿತು.)

**ಃ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ**

ನಾನು ಮಾರ್ಚ್ 2006 ರಿಂದ ಮಾರ್ಚ್ 2008 ರವರೆಗೆ ತರೀಕೆರೆ ವೃತ್ತದಲ್ಲಿ ಸಿ.ಪಿ.ಐ. ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 6.10.2006 ರಂದು ಕ್ರೈಂ.ನಂ.107/06 ರಲ್ಲಿ ಮುಂದಿನ ತನಿಖೆಯನ್ನು ಸಿ.ಡಬ್ಲ್ಯೂ.28 – ಚನ್ನೇಶ ಪಿ.ಎಸ್.ಐ. ಇವರಿಂದ ವಹಿಸಿಕೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಪಂಚರಾದ ಸಿ.ಡಬ್ಲ್ಯೂ.14

– ರುದ್ರಯ್ಯ, 15 - ಮಹಮದ್ ಇಸ್ಮಾಯಿಲ್ ರವರ ಸಮಕ್ಷಮ ನಿ.ಪಿ.3 ರಂತೆ ಮಹಜರ ಮಾಡಿರುತ್ತೇನೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.3(ಸಿ) ಎಂದು ಗುರುತಿಸಲಾ ಗಿದೆ.

2. ಅಂದು ಕೃತ್ಯ ನಡೆದ ಸ್ಥಳದಲ್ಲಿ ನಕಾಶೆ ತಯಾರು ಮಾಡಿರುತ್ತೇನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.19 ಎಂದು ಗುರುತಿಸಲಾಗಿದೆ. ಸ್ಥಳದಲ್ಲಿ ನಿ.ಪಿ.4 ಮತ್ತು 5 ರಂತೆ ಪಂಚರ ಸಮಕ್ಷಮ ಫೋಟೋ ತೆಗೆದಿರುತ್ತೇನೆ. ದಿಃ 6.10.2006 ರಂದು ಸಾಕ್ಷಿದಾರರಾದ ಫ್ರಾಸಾ .4 - ಜಯಣ್ಣ, 2 – ಗಿರೀಶ, ಚಾಸಾ.4– ರಾಮಸ್ವಾಮಿ, ಚಾಸಾ.5 - ನಾಯ್ಡು, 6 – ಡೆಗ್ಗಲಾಲ್ ಮಾತೋ, 7 - ಪ್ರಸನ್ನ, 8 - ಸಂಗಮೇಶ ಇವರ ಹೇಳಿಕೆ ಪಡೆದಿರುತ್ತೇನೆ. ಸಿ.ಡಬ್ಲ್ಯೂ.5 - ನಾಯ್ಡು ಇವರು ಕಂಡಾಕ್ಟರ್ ವೈರ್, ಡ್ರಮ್ ಇತ್ಯಾದಿಗಳನ್ನು ಖರೀದಿ ಮಾಡಿದ ಬಗ್ಗೆ ದಾಖಲೆ ಹಾಜರು ಮಾಡಿರುತ್ತಾರೆ. ಅವುಗಳನ್ನು ಕಡತದಲ್ಲಿ ಸೇರಿಸಿಕೊಂಡಿರುತ್ತೇನೆ.

3. ಆರೋಪಿತರನ್ನು ಮತ್ತು ಮುದ್ದೆಮಾಲುಗಳನ್ನು ಪತ್ತೆ ಹಚ್ಚಲು ಸಿ.ಡಬ್ಲ್ಯೂ.28 - ಪಿ.ಎಸ್.ಐ. ಇವರಿಗೆ ನಿರ್ದೇಶನ ಕೊಟ್ಟಿದ್ದೆನು. ದಿಃ 27.10.2006 ರಂದು ಪಿ.ಎಸ್.ಐ. ಇವರು ನನಗೆ ಫೋನ್ ಮಾಡಿ ಈ ಕೇಸಿಗೆ ಸಂಬಂದಪಟ್ಟ ಆರೋಪಿ 1 ಶ್ರೀನಿವಾಸ ಮತ್ತು ಇತರೆ 4 ಜನರನ್ನು ಬೆಂಗಳೂರು ಆರ್.ಎಂ.ಸಿ. ಯಾರ್ಡ್ ಠಾಣೆಯವರು ಬಂಧಿಸಿದ್ದಾರೆ ಅಂತ ನನಗೆ ಮಾಹಿತಿ ಕೊಟ್ಟರು. ದಿಃ 16.11.2006 ರಂದು ಈ ಕೇಸಿನ ಉಳಿದ ಆರೋಪಿತರನ್ನು ದಸ್ತಗಿರಿ ಮಾಡಲು ನಾನು ಪಿ.ಎಸ್.ಐ. ಮತ್ತು ಸಿಬ್ಬಂದಿಗೆ ನಿರ್ದೇಶನ ಕೊಟ್ಟಿದ್ದೆನು.

4. ದಿಃ 17.11.2006 ರಂದು ಬೆಳಗ್ಗೆ 11 ಗಂಟೆಗೆ ಸಿ.ಡಬ್ಲ್ಯೂ.28 - ಪಿ.ಎಸ್.ಐ. ಇವರು ಆರೋಪಿ 5 ಶಿವಣ್ಣ, 6 - ಮನು ಇವರನ್ನು ತಂದು ನನ್ನ ಮುಂದೆ ಹಾಜರು ಮಾಡಿದರು. ಆ ಸಮಯದಲ್ಲಿ ಸಿ.ಡಬ್ಲ್ಯೂ.28 - ಪಿ.ಎಸ್.ಐ. ನನ್ನ ಮುಂದೆ ವರದಿ ಕೊಟ್ಟಿರುತ್ತಾರೆ. ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.20 ಎಂದು ಗುರುತಿಸಲಾಗಿದೆ. ಆ ಪ್ರಕಾರ ನಾನು ಆರೋಪಿ 5, 6 ಇವರನ್ನು ದಸ್ತಗಿರಿ ಮಾಡಿ ನಿಯಮಗಳನ್ನು ಪಾಲಿಸಿ ಅವರ ಸ್ವಯಿಚ್ಛಾ ಹೇಳಿಕೆ ಪಡೆದಿರುತ್ತೇನೆ. ಆರೋಪಿ 5 - ಶಿವಣ್ಣ ಈತನು "ನನ್ನೊಂದಿಗೆ ಬಂದರೆ ವೈರ್ ಡ್ರಮ್‌ಗಳನ್ನು ಸಾಗಾಣಿಕೆ ಮಾಡಲಾದ ಲಾರಿ ಮತ್ತು ತಂತಿ ಬೇಲಿ ತುಂಡರಿಸಲು ಉಪಯೋಗಿಸಿದ ಕಟ್ಟಿಂಗ್ ಪ್ಲೇಯರ್ ತೋರಿಸಿ ಹಾಜರು ಪಡಿಸುತ್ತೇನೆ" ಅಂತ ಸ್ವಯಿಚ್ಛಾ ಹೇಳಿಕೆ ಕೊಟ್ಟಿರುತ್ತಾನೆ. ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.21 ಎಂದು ಗುರುತಿಸಲಾಗಿದೆ . ಆರೋಪಿ 6 - ಮನು ಈತನು "ನನ್ನೊಂದಿಗೆ ಬಂದರೆ ವೈರ್ ಡ್ರಮ್‌ಗಳನ್ನು ತೆಗೆದ ಸ್ಥಳ ಮತ್ತು ತಂತಿ ಬೇಲಿ ತುಂಡರಿಸಲು ಉಪಯೋಗಿಸಿದ ಕಟ್ಟಿಂಗ್ ಪ್ಲೇಯರ್ ತೋರಿಸಿ ಹಾಜರು ಪಡಿಸುತ್ತೇನೆ" ಅಂತ ಸ್ವಯಿಚ್ಛಾ ಹೇಳಿಕೆ ಕೊಟ್ಟಿರುತ್ತಾನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.22 ಎಂದು ಗುರುತಿಸಲಾಗಿದೆ.

5. ಆಗ ಪಂಚರಾದ ಪಿ.ಡಬ್ಲ್ಯೂ.4 – ಜಯಣ್ಣ, ಪ್ರಾಸಾ.6 – ಎಲ್.ಎನ್.ಜಯಣ್ಣ ಇವರನ್ನು ಕರೆದುಕೊಂಡು ಆರೋಪಿ 5, 6 ಇವರು ತೋರಿಸಿದಂತೆ ದೊಡ್ಡಕುಂದೂರು ಗ್ರಾಮಕ್ಕೆ ಹೋದೆವು. ಆರೋಪಿ 5 ಶಿವಣ್ಣ ಇವನು ಮುಂದೆ ಹೋಗಿ ಅವರ ಮನೆಯ ಹತ್ತಿರ ಇದ್ದ ಲಾರಿ ನಂಬರು ಕೆಎ-14-7937 ಇದನ್ನು ತೋರಿಸಿದನು. ಅದೇ ರೀತಿ ಲಾರಿಯಲ್ಲಿ ಇದ್ದಂತಹ ಕಟ್ಟಿಂಗ್ ಪ್ಲೇಯರ್‌ನ್ನು ತೋರಿಸಿ

ಹಾಜರು ಮಾಡಿದನು. ಆ ಸಮಯದಲ್ಲಿ ನಾನು ಪಂಚರ ಸಮಕ್ಷಮ ನಿ.ಪಿ.1 ರಂತೆ ಮಹಜರ ಮಾಡಿ ಕೇಬಲ್ ಸಾಗಾಣಿಕೆ ಮಾಡಲು ಉಪಯೋಗಿಸಿದ ಲಾರಿ ನಂಬರು ಕೆಎ-14-7937 ಮತ್ತು ಕಟ್ಟಿಂಗ್ ಪ್ಲೇಯರ್‌ನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅವುಗಳನ್ನು ನಮ್ಮ ಠಾಣಾ ಪಿ.ಎಫ್.ನಂ.79/06 ರಲ್ಲಿ ಆಳವಡಿಸಿಕೊಂಡಿರುತ್ತೇನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.23 ಎಂದು ಗುರುತಿಸಲಾಗಿದೆ.

6. ಅದೇ ರೀತಿ ಅಂದು ಆರೋಪಿ 6 - ಮನು ಈತನು ಮುಂದೆ ಮುಂದೆ ಹೋಗಿ ಆತನ ಮನೆಯ ಹತ್ತಿರ ಹೋಗಿ ಅದೇ ಪಂಚರ ಸಮಕ್ಷಮ ಮನೆಯೊಳಗಡೆ ಇಟ್ಟಂತಹ ಕಟ್ಟಿಂಗ್ ಪ್ಲೇಯರ್‌ನ್ನು ತಂದು ನಮ್ಮ ಮುಂದೆ ಹಾಜರು ಮಾಡಿದನು. ಆ ಸಮಯದಲ್ಲಿ ಅದೇ ನಿ.ಪಿ.1 ಮಹಜರ ಮುಂದುವರೆಸಿ ಮಹಜರ ಮಾಡಿರುತ್ತೇನೆ. ಅವುಗಳನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ಮು.ಮಾ.2 ಮತ್ತು 3 ಎಂದು ಗುರುತಿಸಲಾಗಿದೆ. ಸದರಿ ಆರೋಪಿ 5, 6 ಮತ್ತು ಮುದ್ದೆಮಾಲುಗಳನ್ನು ತೆಗೆದುಕೊಂಡು ನಾನು ಠಾಣೆಗೆ ಬಂದೆನು. ಈಗ ತೋರಿಸಿದ ಫೋಟೋ ನೋಡುತ್ತಿದ್ದೇನೆ ಅವುಗಳನ್ನು ಲಾರಿಯನ್ನು ಠಾಣೆಯ ಮುಂದಿಟ್ಟಾಗ ತೆಗೆಯಲಾಗಿದೆ. ಅವುಗಳನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.24 ರಿಂದ 27 ಎಂದು ಗುರುತಿಸಲಾಗಿದೆ. ಸದರಿ ಲಾರಿ ಈಗ ಲಿಂಗದಹಳ್ಳಿ ಠಾಣೆಯ ಮುಂದಿರುತ್ತದೆ. ಅದನ್ನು ಇಲ್ಲಿಯವರೆಗೆ ಯಾರು ಬಿಡಿಸಿಕೊಂಡು ಹೋಗಿರುವುದಿಲ್ಲ. ಅದನ್ನು ಜಿಲ್ಲಾ ಕೋರ್ಟ್‌ಗೆ ತರುವ ಸ್ಥಿತಿಯಲ್ಲಿರುವುದಿಲ್ಲ ಏಕೆಂದರೆ ಕೆಟ್ಟು ಹೋಗಿದೆ.

7. ಆರೋಪಿ 5, 6 ಇವರು ಹೆಚ್ಚಿನ ತನಿಖೆಗೆ ಬೇಡವಾಗಿದ್ದರಿಂದ ಅವರನ್ನು ರಿಮ್ಯಾಂಡ್ ಅರ್ಜಿ ಜೊತೆಗೆ ದಿಃ 17.11.2006 ರಂದು ಜೆ.ಎಂ.ಎಫ್.ಸಿ. ತರೀಕೆರೆ ಇವರ

ಮುಂದೆ ಹಾಜರು ಮಾಡಿರುತ್ತೇನೆ. ಆರೋಪಿ 1 - ಶ್ರೀನಿವಾಸ, 2 – ಅಶ್ರಫ್, 3 - ಮಂಜ, 4 – ರಾಜು ಇವರನ್ನು ಬಾಡಿ ವಾರೆಂಟ್ ಮೂಲಕ ಕ್ರೈ.ನಂ.107/06 ರಲ್ಲಿ ತರೀಕೆರೆ ಕೋರ್ಟ್‌ನಲ್ಲಿ ಹಾಜರು ಮಾಡಿದ್ದರಿಂದ ಸದರಿ ಆರೋಪಿತರು ನಮ್ಮ ಹೆಚ್ಚಿನ ತನಿಖೆಗೆ ಬೇಕಾಗಿದ್ದಾರೆ ಅಂತ ದಿಃ 17.11.2006 ರಂದು ಆರೋಪಿ 1 ರಿಂದ 4 ಇವರನ್ನು ಪೋಲೀಸ್ ವಶಕ್ಕೆ ತೆಗೆದುಕೊಂಡೆವು. ಆರೋಪಿ 1 ರಿಂದ 4 ಇವರನ್ನು ವಿಚಾರಣೆ ಮಾಡಿ ಅವರ ಸ್ವಯಿಚ್ಛಾ ಹೇಳಿಕೆ ಪಡೆದಿರುತ್ತೇನೆ. ಆರೋಪಿ 1 - ಶ್ರೀನಿವಾಸ ಈತನು "ನನ್ನೊಂದಿಗೆ ಬಂದರೆ ವೈರ್ ಡ್ರಮ್‌ಗಳನ್ನು ತೆಗೆದ ಸ್ಥಳ, ತಂತಿ ಬೇಲಿ ತುಂಡರಿಸಲು ಉಪಯೋಗಿಸಿದ ಕಟ್ಟಿಂಗ್ ಪ್ಲೇಯರ್ ತೋರಿಸಿ ಹಾಜರು ಪಡಿಸುತ್ತೇನೆ" ಅಂತ ಸ್ವಯಿಚ್ಛಾ ಹೇಳಿಕೆ ಕೊಟ್ಟಿರುತ್ತಾನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.28 ಎಂದು ಗುರುತಿಸಲಾಗಿದೆ.

8. ಆರೋಪಿ 1 ಹೇಳಿಕೆಯ ಮೇರೆಗೆ ಆರೋಪಿ 1 ತೋರಿಸಿದಂತೆ ದಿಃ 18.11.2006 ರಂದು ಪಂಚರಾದ ಸಿ.ಡಬ್ಲ್ಯೂ.11 - ಚಂದ್ರಶೇಖರ್, 12 -ಮಹೇಶ್ವರ ಇವರುಗಳನ್ನು ಕರೆದುಕೊಂಡು ದೊಡ್ಡಕುಂದೂರು ಗ್ರಾಮಕ್ಕೆ ಹೋದೆವು. ಅಲ್ಲಿ ಆರೋಪಿ 1 ಕೃತ್ಯ ಮಾಡಲು ಉಪಯೋಗಿಸಿದ ಕಟ್ಟಿಂಗ್ ಪ್ಲೇಯರ್‌ನ್ನು ತಂದು ಹಾಜರು ಮಾಡಿದನು. ಆ ಸಮಯದಲ್ಲಿ ನಾನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.17 ರಂತೆ ಗುರುತಿಸಲ್ಪಟ್ಟಿರುವ ಅಮಾನತ್ತು ಮಹಜರ ಮಾಡಿ ಕಟ್ಟಿಂಗ್ ಪ್ಲೇಯರ್‌ನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.17(ಸಿ) ಎಂದು ಗುರುತಿಸಲಾಗಿದೆ. ಸದರಿ ಕಟ್ಟಿಂಗ್ ಪ್ಲೇಯರನ್ನು ನಮ್ಮ ಠಾಣಾ ಪಿ.ಎಫ್.ನ.80/06 ರಲ್ಲಿ

ಅಳವಡಿಸಿಕೊಂಡಿರುತ್ತೇನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.29 ಎಂದು ಗುರುತಿಸಲಾಗಿದೆ. ಸದರಿ ಕಟ್ಟಿಂಗ್ ಪ್ಲೇಯರ್‌ನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ಮು.ಮಾ.4 ಅಂತ ಮಾರ್ಕ್ ಮಾಡಲಾಗಿದೆ. ನಂತರ ಠಾಣೆಗೆ ಹಿಂತುರುಗಿ ಆರೋಪಿ 1 ರಿಂದ 4 ಇವರನ್ನು ದಿ: 18.11.2006 ರಂದು ನ್ಯಾಯಾಧೀಶರ ಮುಂದೆ ಹಾಜರು ಮಾಡಿರುತ್ತೇನೆ.

9. ದಿ: 20.11.2006 ರಂದು ಎ.ಎಸ್.ಐ. ದೊಡ್ಡ ಮರಿಯಪ್ಪ ಬೆಂಗಳೂರು ಆರ್.ಎಂ.ಸಿ. ಯಾರ್ಡ್ ಠಾಣೆಯಿಂದ ಈ ಕೇಸಿಗೆ ಸಂಬಂದಪಟ್ಟ ಮುದ್ದೆಮಾಲು ಮತ್ತು ಕಡತ ತಂದು ನನ್ನ ಮುಂದೆ ಹಾಜರು ಮಾಡಿದನು. ಅಂದರೆ 2 ಎ.ಸಿ.ಎಸ್.ಆರ್. ಅಲ್ಯೂಮಿನಿಯಂ ವೈರ್ ಡ್ರಮ್‌ಗಳನ್ನು ಹಾಜರು ಮಾಡಿದನು. ಅವುಗಳನ್ನು ನಮ್ಮ ಠಾಣಾ ಪಿ.ಎಫ್.ನಂ.81/06 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.30 ಎಂದು ಗುರುತಿಸಲಾಗಿದೆ. ಸದರಿ 2 ಡ್ರಮ್ ಕೇಬಲ್‌ಗಳನ್ನು ಜೆ.ಎಂ.ಎಫ್.ಸಿ. ತರೀಕೆರೆ ಇವರ ಆದೇಶದ ಮೆರಗೆ ಸಂಬಂದಪಟ್ಟ ಮಾಲೀಕರಿಗೆ ಬಿಟ್ಟಿದ್ದೇವೆ. ದಿ: 30.11.2006 ರಂದು ಆರೋಪಿ 7 , ಲೋಕೇಶ್, 8 - ಬ್ಯಾಟರಿ ಮಂಜ, 9 – ರಮೇಶ ಇವರು ತರೀಕೆರೆ ಜೆ.ಎಂ.ಎಫ್.ಸಿ. ಇವರ ಮುಂದೆ ಹಾಜರಾಗಿದ್ದರು. ಆ ಸಮಯದಲ್ಲಿ ನಾನು ನ್ಯಾಯಾಧೀಶರ ಮುಂದೆ ಅರ್ಜಿ ಕೊಟ್ಟು ಆರೋಪಿ 7 ರಿಂದ 9 ಇವರನ್ನು ಪೋಲೀಸ್ ವಶಕ್ಕೆ ತೆಗೆದುಕೊಂಡಿರುತ್ತೇನೆ.

10. ಆರೋಪಿ 7 ರಿಂದ 9 ನನ್ನ ಮುಂದೆ ಸ್ವಯಿಚ್ಛಾ ಹೇಳಿಕೆ ಕೊಟ್ಟಿರುತ್ತಾರೆ. ಆರೋಪಿ 8 - ಮಂಜ ಆಲಿಯಾಸ್ ಬ್ಯಾಟರಿ ಮಂಜ ಈತನು "ನನ್ನೊಂದಿಗೆ ಬಂದರೆ ಡ್ರಮ್‌ಗಳನ್ನು ಸಾಗಾಣಿಕೆ ಮಾಡಲು ಉಪಯೋಗಿಸಿದ ಬಡಿಗೆ ಬಚ್ಚಿಟ್ಟಿರುವ ಜಾಗ

ತೋರಿಸುತ್ತೇನೆ” ಅಂತ ಸ್ವಯಿಚ್ಛಾ ಹೇಳಿಕೆ ಕೊಟ್ಟಿರುತ್ತಾನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.31 ಎಂದು ಗುರುತಿಸಲಾಗಿದೆ. ಆ ಪ್ರಕಾರ ಆರೋಪಿ 8 ತೋರಿಸಿದಂತೆ ಅವನನ್ನು ಹಿಂಬಾಲಿಸಿಕೊಂಡು ಹುಲಿ ತಿಮ್ಮಾಪುರ ರಸ್ತೆ ಪಂಚರನ್ನು ಕರೆದುಕೊಂಡು ಹೋದೆವು. ಅಲ್ಲಿ ಆರೋಪಿ 8 ಸೇತುವೆಯ ಅಡಿಯುಲ್ಲಿಟ್ಟಂತಹ ದೊಣ್ಣೆಯನ್ನು ತಂದು ನಮ್ಮ ಮುಂದೆ ಹಾಜರು ಮಾಡಿದನು. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.18 ರಂತೆ ಗುರುತಿಸಲ್ಪಟ್ಟಿರುವ ಮಹಜರ ಮಾಡಿ ಮು.ಮಾ.5 – ದೊಣ್ಣೆ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.18(ಸಿ) ಎಂದು ಗುರುತಿಸಲಾಗಿದೆ.

11. ಆರೋಪಿ 8 ಇವನನ್ನು ಮುದ್ದೆಮಾಲಿನ ಸಮೇತ ಠಾಣೆಗೆ ಕರೆದುಕೊಂಡು ಬಂದೆನು. ಸದರಿ ಮು.ಮಾ.5 ದೊಣ್ಣೆಯನ್ನು ಠಾಣಾ ಪಿ.ಎಫ್.83/06 ರಲ್ಲಿ ಅಳವಡಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.32 ಎಂದು ಗುರುತಿಸಲಾಗಿದೆ. ಆರೋಪಿ 7 ರಿಂದ 9 ಇವರನ್ನು ರಿಮ್ಯಾಂಡ್ ಅರ್ಜಿ ಜೊತೆಗೆ ನ್ಯಾಯಾಧೀಶರ ಮುಂದೆ ಹಾಜರು ಮಾಡಿರುತ್ತೇವೆ. ದಿ: 18.11.2006 ಮತ್ತು 30.11.2006 ರಂದು ಸಾಕ್ಷೀದಾರರಾದ ಪಿ.ಡಬ್ಲ್ಯೂ.2 – ಗಿರೀಶ್ ಇವರ ಮರು ಹೇಳಿಕೆ ಪಡೆದಿರುತ್ತೇನೆ. ಪಿ.ಡಬ್ಲ್ಯೂ.2 ನನ್ನ ಮುಂದೆ ನಿ.ಪಿ.5 ರಿಂದ 7 ರ ಪ್ರಕಾರ ಹೇಳಿಕೆ ಕೊಟ್ಟಿರುತ್ತಾನೆ. ಪಿ.ಡಬ್ಲ್ಯೂ.4 – ಜಯಣ್ಣ ನಿ.ಪಿ.11 ರಂತೆ, ಪಿ.ಡಬ್ಲ್ಯೂ.8 – ಯತೀಶ್ ನಿ.ಪಿ.12 ಮತ್ತು ನಿಪಿ.13 ರಂತೆ ಹೇಳಿಕೆ ಕೊಟ್ಟಿರುತ್ತಾರೆ.

12. ಬೆಂಗಳೂರು ಆರ್.ಎಂ.ಸಿ. ಯಾರ್ಡ್ ಠಾಣೆಯಲ್ಲಿ ದಾಖಲಾದಂತಹ ಕ್ರೈಂ. ನಂ.189/06 ರಲ್ಲಿಯ ಎಫ್.ಐ.ಆರ್., ದಾಖಲೆಗಳನ್ನು ವರ್ಗಾವಣೆ ಮಾಡಿ ಕಳುಹಿಸಿಕೊಟ್ಟಂತಹ ಪತ್ರಗಳನ್ನು ಹಾಜರು ಮಾಡಿರುತ್ತೇನೆ. ಅವುಗಳನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.33 ಮತ್ತು 34 ಎಂದು ಗುರುತಿಸಲಾಗಿದೆ. ದಿ: 5.10.2006 ರಂದು ಸಿ.ಡಬ್ಲ್ಯೂ.28 ಪಿ.ಎಸ್.ಐ. ಇವರು ಕೇಸ್ ದಾಖಲು ಮಾಡಿ ಪ್ರ.ವ.ವ. ಯನ್ನು ಕೋರ್ಟ್‌ಗೆ ಕಳುಹಿಸಿ ಕೊಟ್ಟಿದ್ದರು. ಅದನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಮೂಲ ಸ್ಪೆಷಲ್ ಕೇಸ್ 47/2012 ರಲ್ಲಿ ನಿ.ಪಿ.35 ಎಂದು ಗುರುತಿಸಲಾಗಿದೆ. ಸದರಿ ಪಿ.ಎಸ್.ಐ. ಇವರು ಕೇವಲ ಎಫ್.ಐ.ಆರ್. ಮಾಡಿದ್ದಾರೆ ಮುಂದಿನ ತನಿಖೆಯನ್ನು ನಾನೇ ವಹಿಸಿಕೊಂಡಿರುತ್ತೇನೆ. ತನಿಖೆ ಮುಕ್ತಾಯವಾಗಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**<u>: ಪಾಟೀ ಸವಾಲು ಶ್ರೀ ಐ ಎಸ್ ಟಿ ವಕೀಲರಿಂದ : 4 ನೇ ಆರೋಪಿ ಪರವಾಗಿ:-</u>**

13. ನೀವು ಹೇಳಿದಂತೆ 4 ನೇ ಆರೋಪಿ ನಿಮ್ಮ ಮುಂದೆ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಪ್ರಕರಣಕ್ಕೆ ಅನುಗುಣವಾಗಿ ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ಬೆಂಗಳೂರಿನ ಆರ್.ಎಂ.ಸಿ. ಯಾರ್ಡ್ ನ ಮೊಕದ್ದಮೆ ಸಂಖ್ಯೆ 189/2006 ರಲ್ಲಿ ವಶಪಡಿಸಿಕೊಳ್ಳಲಾಯಿತು ಎಂದು ಹೇಳಲಾದ ಮುದ್ದೆ ಮಾಲುಗಳನ್ನು ವರ್ಗಾವಣೆ ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಸದರಿ ವರ್ಗಾವಣೆಗೊಂಡಿದ್ದ ಮಾಲುಗಳು ಈ ಪ್ರಕರಣಕ್ಕೆ ಸಂಬಂಧಿಸಿದವು ಎಂದು ಖಚಿತಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಆರ್ ಎಂ ಸಿ ಯಾರ್ಡ್

ಪೊಲೀಸ್ ಠಾಣೆಯಲ್ಲಿ ಅವುಗಳನ್ನು ವರ್ಗಾವಣೆ ಕೊಟ್ಟ ಮೇಲೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಆದರೆ ಅವುಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ತೋರಿಸಲು ನನ್ನ ತನಿಖಾ ಕಾಲದಲ್ಲಿ ಖಚಿತಪಡಿಸಿಕೊಂಡಿಲ್ಲ. ಲಿಂಗದಹಳ್ಳಿಯ ಸುತ್ತಮುತ್ತ ಅರಣ್ಯ ಪ್ರದೇಶವಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುತ್ತ ಇಲ್ಲ ಕೆಲವು ಭಾಗದಲ್ಲಿ ಇದೆ ಎನ್ನುತ್ತಾರೆ. ಲಿಂಗದಹಳ್ಳಿಗೆ ಪ್ರವೇಶಿಸಲು ಅರಣ್ಯ ಇಲಾಖೆಯಿಂದ ಚೆಕ್ ಪೋಸ್ಟ್ ಗಳನ್ನು ನಿರ್ಮಿಸಲಾಗಿದೆ ಎಂದರೆ ಸಾಕ್ಷಿ ಒಂದು ಭಾಗದಲ್ಲಿ ನಿರ್ಮಿಸಲಾಗಿದೆ ಎನ್ನುತ್ತಾರೆ. ರಾಮಸ್ವಾಮಿರವರ ಜಮೀನಿನಲ್ಲಿ ಪಂಚನಾಮೆಯನ್ನು ಜರುಗಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನೀವು ಹೇಳಿರುವ ವೈರ್ ನ ಡ್ರಮ್ ಗಳು ಸುಮಾರು 4 ರಿಂದ 5 ಕ್ವಿಂಟಾಲ್ ತೂಕವಿರುತ್ತದೆ ಎಂದರೆ ಸರಿ. ಸದರಿ ಡ್ರಮ್ ಗಳನ್ನು ಮೆಷಿನ್ ಗಳ ಸಹಾಯವಿಲ್ಲದೇ ಮನುಷ್ಯರಿಗೆ ಸ್ಥಳಾಂತರಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ಮುದ್ದೆ ಮಾಲುಗಳಿಗೂ ಮತ್ತು 4 ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ತನಿಖೆಯಲ್ಲಿ 4 ನೇ ಆರೋಪಿಯ ವಿರುದ್ಧ ಯಾವುದೇ ಆರೋಪಗಳು ಸಾಬೀತಾಗದೇ ಇದ್ದರೂ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನೀವು ಕೆ ಪಿ ಟಿ ಸಿ ಎಲ್ ನಿಂದ ಪಡೆದುಕೊಂಡಿದ್ದೀರಿ ಎಂದು ಹೇಳಲಾದ ಯಾವುದೇ ದಾಖಲೆಗಳನ್ನು ಅಂತಿಮ ವರದಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನೀವು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಪಂಚನಾಮೆಯನ್ನು

ಜರುಗಿಸಿಲ್ಲ, ಯಾವುದೇ ಮುದ್ದೆ ಮಾಲುಗಳನ್ನು ಅಮಾನತುಪಡಿಸಿಕೊಂಡಿಲ್ಲ ಮತ್ತು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

2 ನೇ **ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**